ದಿನಾಂಕಃ 15.03.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**<u>ಪಾಟೀ ಸವಾಲು : 2 ನೇ ಎದುರುದಾರರ ಪರ : ಶ್ರೀ ಕೆ ಎಂ ಬಿ ವಕೀಲರಿಂದಃ</u>**

1. ನನ್ನನ್ನು ಹರ್ಷಿತ್ ಜಿಗೋಗಿಕೋಲಮಠ್ ಮತ್ತು ಹರ್ಷ ಎಂದು ಕರೆಯುತ್ತಾರೆ. ನಾನು ಅಪಘಾತದ ದಿನ ಹಿಂಬದಿ ಸವಾರನಾಗಿದ್ದು, ಆ ದಿನ ನನ್ನ ಸ್ನೇಹಿತ ರಕ್ಷಿತ್ ದ್ವಿ ಚಕ್ರ ವಾಹನವನ್ನು ಚಲಾಯಿಸುತ್ತಿದ್ದ, ಸದರಿ ದ್ವಿ ಚಕ್ರ ವಾಹನದ ಮಾಲೀಕ ನನ್ನ ಸ್ನೇಹಿತ ರಕ್ಷಿತ್ ಆಗಿದ್ದ. ಆ ದಿನ ನಾನು 3 ಜನ ದ್ವಿ ಚಕ್ರ ವಾಹನದಲ್ಲಿ ಹೋಗುತ್ತಿದ್ದೆವು. ರಕ್ಷಿತ್ ಹಿಂಬದಿಯಲ್ಲಿ ಅಭಿಷೇಕ್ ಕುಳಿತುಕೊಂಡಿದ್ದು, ನಾನು ನಂತರ ಕುಳಿತುಕೊಂಡಿದ್ದೆ. ರಕ್ಷಿತ್ ಚಲಾಯಿಸುತ್ತಿದ್ದ ದ್ವಿ ಚಕ್ರ ವಾಹನದ ಸಂಖ್ಯೆ ಗೊತ್ತಿಲ್ಲ. ಅಪಘಾತವಾದಾಗ ಸುಮಾರು 7.05 ಗಂಟೆಯಾಗಿತ್ತು. ಅಪಘಾತದಲ್ಲಿ ಅಭಿಷೇಕ್ ಮರಣ ಹೊಂದಿದ್ದು, ನಮ್ಮಿಬ್ಬರಿಗೆ ಗಾಯಗಳಾಗಿರುತ್ತದೆ. ರಕ್ಷಿತ್ ನ್ಯಾಯಾಲಯದಲ್ಲಿ ಪರಿಹಾರ ಕೇಳಿಕೊಂಡು ದಾವೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ನಾವು ಬೋಗಾದಿ ರಸ್ತೆಯಿಂದ ಅಗ್ರಹಾರದ ಕಡೆಗೆ ಹೋಗುತ್ತಿದ್ದೆವು. ಅಪಘಾತವಾದ ಸ್ಥಳ ತಿಪ್ಪೇಸ್ವಾಮಿ ಸರ್ಕಲ್ ಆಗಿರುತ್ತದೆ. ಅಪಘಾತಪಡಿಸಿದ ಕಾರ್ ನಮ್ಮ ಎದುರುಗಡೆಯಿಂದ ಬರುತ್ತಿತ್ತು. ನಾನು ಹೋಗುತ್ತಿದ್ದ ಮೋಟರ್ ಸೈಕಲ್ ಅನ್ನು ರಕ್ಷಿತ್ ಅತಿವೇಗವಾಗಿ ಚಲಾಯಿಸುತ್ತಿದ್ದ. ಅಪಘಾತವು ಮುಖಾಮುಖಿ ಡಿಕ್ಕಿಯಾಗಿ ಆಗಿರುತ್ತದೆ. ಆ ದಿನ ನಾವು 3 ಜನ ಒಂದೇ ವಾಹನದಲ್ಲಿ ಹೋಗುತ್ತಿದ್ದು, ಅಪಘಾತವು ರಕ್ಷಿತ್ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ.

2. ಅಪಘಾತವಾದಾಗ ನಾನು ಡಿಪ್ಲೋಮ ಇನ್ ಕಂಪ್ಯೂಟರ್ ಸೈನ್ಸ್ ಓದುತ್ತಿದ್ದೆ. ನನಗೆ ರೂ.15 ಸಾವಿರ ಸಂಪಾದನೆ ಇತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನಾನು ಡಿ ಆರ್ ಎಂ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಡಿ ಆರ್ ಎಂ ಆಸ್ಪತ್ರೆಯಲ್ಲಿ ಒಟ್ಟು 45 ದಿನ ದಾಖಲಾಗಿದ್ದೆ. ನನ್ನ ಬಲಗಾಲಿಗೆ

ಶಸ್ತ್ರ ಚಿಕಿತ್ಸೆಯಾಗಿರುತ್ತದೆ. ನನಗೆ ಶಸ್ತ್ರ ಚಿಕಿತ್ಸೆ ಮಾಡಿದ ವೈದ್ಯರ ಹೆಸರು ಗೌತಮ್ ಮತ್ತು ಕಿರಣ್. ಅಪಘಾತವಾದ ನಂತರ ನಾನು ಹೊರರೋಗಿಯಾಗಿ 12 ರಿಂದ 13 ಬಾರಿ ಆಸ್ಪತ್ರೆಗೆ ಹೋಗಿದ್ದು, ಈಗಲೂ ಸಹ ಹೋಗಿದ್ದೇನೆ. ನನಗೆ ಅಳವಡಿಸಿರುವ ರಾಡ್ ಮತ್ತು ಸ್ಕ್ರೂ ಅನ್ನು ಇನ್ನು ತೆಗೆದಿರುವುದಿಲ್ಲ, ಅದಕ್ಕೆ ಇನ್ನೊಂದು ಶಸ್ತ್ರ ಚಿಕಿತ್ಸೆಯಾಗಬೇಕು. ಆಸ್ಪತ್ರೆಯಲ್ಲಿ ನಾನು ಔಷದೋಪಚಾರಕ್ಕೆ ರೂ.5 ಲಕ್ಷ, ಸಹಾಯಕ ಹಾಗೂ ಊಟ-ತಿಂಡಿಗೆ ರೂ.50 ಸಾವಿರ ಹಾಗೂ ಹೊರರೋಗಿಯಾಗಿ ಆಸ್ಪತ್ರೆ ಹೋಗಲು ರೂ.1 ಲಕ್ಷ ಖರ್ಚು ಮಾಡಿದ್ದೇನೆ ಎಂದು ಹೇಳಿದ್ದು, ಹೆಚ್ಚಿನ ಪರಿಹಾರ ಪಡೆಯಬೇಕೆಂಬ ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮುಂದಿನ ವೈದ್ಯಕೀಯ ವೆಚ್ಚಕ್ಕೆ ರೂ.2 ಲಕ್ಷ ಬೇಕು ಎಂದು ಹೇಳಿದ್ದು, ಆಗ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಯಾವುದೇ ಸಹಾಯಕರನ್ನು ನೇಮಕ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಾರ್ ಬಾಡಿಗೆಗೆ ಪಡೆದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸದೇ ಇರುವ ಕಾರಣಕ್ಕೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ-12-ಯು-0162 ಹೊಸ ಮೋಟಾರ್ ಸೈಕಲ್ ಎಂದರೆ ಸರಿ. ಸದರಿ ದ್ವಿ ಚಕ್ರ ವಾಹನದ ಇನ್ಸೂರೆನ್ಸ್ ಅವಧಿಯ ಎರಡೇ ವರ್ಷದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಹಿಂಬದಿ ಸವಾರನಿಗೆ ಸಂಬಂಧಿಸಿದಂತೆ ಇನ್ಸೂರೆನ್ಸ್ ಅನ್ನು ನವೀಕರಿಸದೇ ಇರುವ ಕಾರಣಕ್ಕೆ 2 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನಿಪಿ 11 ರ ಪುಟ ಸಂಖ್ಯೆ 55 ರ ನಂತರದಲ್ಲಿರುವ ದಾಖಲಾತಿಯಲ್ಲಿ ಡಿ ಆರ್ ಎಂ ಆಸ್ಪೆತ್ರೆಯ ಸೀಲು ಮತ್ತು ಸಹಿ ಇದ್ದು, ಅದರ ಹಿಂದಿನ ದಾಖಲಾತಿಯಲ್ಲ ಯಾವುದೇ ಸೀಲು ಮತ್ತು ಸಹಿ ಇಲ್ಲದ ಕಾರಣ ನಾನು ಅದನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂಬ ದುರುದ್ದೇಶದಿಂದ ನಾನು

ಮೆಡಿಕಲ್ ಬಿಲ್ಲುಗಳನ್ನು ಹಾಜರುಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ፡ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.

ನಾನು ಔಷಧೋಪಚಾರಕ್ಕೆ ರೂ. 2 ಲಕ್ಷ, ಊಟ ತಿಂಡಿಗೆ ರೂ.50 ಸಾವಿರ, ಕಾರ್ ಬಾಡಿಗೆಗೆ ರೂ. 10 ಸಾವಿರ ಖರ್ಚು ಮಾಡಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ವೈದ್ಯಕೀಯ ವೆಚ್ಚಕ್ಕೆ ರೂ.1 ಲಕ್ಷ ಬೇಕು ಎಂದು ಹೇಳಿದ್ದು, ಆಗ ಬಗ್ಗೆ ನಾನು ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ನಾನು ಈಗ ಸಂಪೂರ್ಣ ಗುಣಮುಖಳಾಗಿದ್ದೇನೆ ಎಂದರೆ ಸರಿಯಲ್ಲ,